## ನಿಮ್ಮೊಡನೆ

# ಸರ್ಕಾರಿ ಶಾಲೆ: ಸರ್ಕಾರದ ಕಣ್ಣಾಮುಚ್ಚಾಲೆ

> ಪ್ರಾಥಮಿಕ ಶಿಕ್ಷಣವನ್ನು ಹೆಚ್ಚೂ ಕಡಿಮೆ ಖಾಸಗೀಕರಣ ಮಾಡಿರುವ ಸರ್ಕಾರ, ಸರ್ಕಾರಿ ಶಾಲೆಗಳನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಿ ಖಾಸಗಿ ಶಾಲೆಗಳತ್ತ ಮುಖ ಮಾಡುವ ಸಂದರ್ಭವನ್ನು ಸೃಷ್ಟಿಸಿದೆ; ತನ್ನ ವೈಫಲ್ಯವನ್ನು ಮರೆಮಾಚುವ ನಿಟ್ಟಿನಲ್ಲಿ ಸರ್ಕಾರ ಇದೀಗ ಇಂಗ್ಲಿಷ್ ಮಾಧ್ಯಮದ ಪ್ಲಕಾರ್ಡ್ ಹಿಡಿದು ಜನರನ್ನು ಮರುಳುಗೊಳಿಸುತ್ತಿದೆ

ಮುಂಬರುವ ಶೈಕ್ಷಣಿಕ ವರ್ಷದಿಂದ ಆಯ್ದ 1000 ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಆರಂಭಿಸುವ ಸರ್ಕಾರದ ನಿರ್ಧಾರ ಸಾರ್ವಜನಿಕ ಚರ್ಚೆಗೆ ಗ್ರಾಸವಾಗಿದೆ. ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಸರ್ಕಾರ ಆರಂಭಿಸುವುದು ಕನ್ನಡ ವಿರೋಧಿ ನಿಲುವು ಎನ್ನುವುದು ಕೆಲವು ಹಿರಿಯ ಲೇಖಕರ ಅಭಿಪ್ರಾಯ. ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಗೋಕಾಕ್ ಮಾದರಿಯ ಚಳವಳಿಯನ್ನು ನಡೆಸುವ ಮಾತುಗಳನ್ನೂ ಈ ಬರಹಗಾರರು ಆಡಿದ್ದಾರೆ. ಮತ್ತೊಂದು ತುದಿಯಲ್ಲಿ, ಇಂಗ್ಲಿಷ್ ಮಾಧ್ಯಮವನ್ನು ವಿರೋಧಿಸುವುದು ದಲಿತರು ಹಾಗೂ ಜನಸಾಮಾನ್ಯರ ಮಕ್ಕಳನ್ನು ಇಂಗ್ಲಿಷ್ ಕಲಿಕೆಯಿಂದ ವಂಚಿಸುವ ತಂತ್ರ ಎನ್ನುವ ಅಭಿಪ್ರಾಯವೂ ವ್ಯಕ್ತವಾಗಿದೆ. ಈ ಪರ ವಿರೋಧದ ಮಾತುಗಳ ಉತ್ಸಾಹದಲ್ಲಿ, ಚರ್ಚೆಯಾಗಬೇಕಿದ್ದ ಮುಖ್ಯವಾದ ಸಂಗತಿಯೇ ಹಿನ್ನೆಲೆಗೆ ಸರಿದಿದೆ.


ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಪ್ರತಿ ವರ್ಷ ಸಾವಿರಾರು ಶಾಲೆಗಳನ್ನು ಮುಚ್ಚಲಾಗುತ್ತಿದೆ. ಇರುವ ಬಹುತೇಕ ಶಾಲೆಗಳು ಕೂಡ ಮೂಲಭೂತ ಸೌಕರ್ಯಗಳಿಂದ ವಂಚಿತಗೊಂಡು ದಿನಗಳನ್ನು ಎಣಿಸುತ್ತಿವೆ. ತರಗತಿಗಳಲ್ಲಿ ಬೋಧಿಸಬೇಕಾದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಸರ್ಕಾರ ಕಾರಕೂನರಂತೆ ನಡೆಸಿಕೊಳ್ಳುತ್ತಿದೆ. ಇಪ್ಪತ್ತಕ್ಕೂ ಹೆಚ್ಚು ಪಠ್ಯೇತರ ಚಟುವಟಿಕೆಗಳ ಹೊರೆಯನ್ನು ಹೊತ್ತಿರುವ ಶಿಕ್ಷಕರು ಪಾಠವನ್ನೂ ಮಾಡಬೇಕೆಂದು ಸರ್ಕಾರ ನಿರೀಕ್ಷಿಸುತ್ತಿದೆ. ಈವರೆಗಿನ ಎಲ್ಲ ಸರ್ಕಾರಗಳ ಸಂಕಲ್ಪಶಕ್ತಿಯ ಕೊರತೆಯಿಂದಾಗಿಯೇ ಸರ್ಕಾರಿ ಶಾಲೆಗಳು ಹೆಚ್ಚೂ ಕಡಿಮೆ ದೊಡ್ಡಿಗಳ ಸ್ವರೂಪ ಪಡೆದಿವೆ. ಇಂಥ ಸಂದರ್ಭದಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಆರಂಭಿಸುವ ಸರ್ಕಾರದ ಉತ್ಸಾಹವನ್ನು ಶಂಕೆಯಿಂದಲೇ ನೋಡಬೇಕು. ಗುಣಮಟ್ಟದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಇಂಗ್ಲಿಷ್ ಶಾಲೆಗಳ ನಡುವೆ ಸಾಕಷ್ಟು ವ್ಯತ್ಯಾಸವಿದೆ ಎನ್ನುವ ಭಾವನೆ ಪೋಷಕರಲ್ಲಿದೆ. ಈಗ ಸಾವಿರ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭಿಸುವ ಸರ್ಕಾರದ ನಿರ್ಧಾರ, ಸರ್ಕಾರಿ ಶಾಲೆಗಳ ನಡುವೆಯೇ ತರತಮ ಭಾವನೆಯನ್ನು ಉಂಟುಮಾಡುವಂತಹದ್ದು ಎನ್ನುವುದನ್ನೂ ಗಮನಿಸಬೇಕು.

ಇಂಗ್ಲಿಷ್ ಮಾಧ್ಯಮ ಎನ್ನುವಂತಹದ್ದು ಸರ್ಕಾರದ ಪಾಲಿಗೆ ಒಂದು ಜನಪ್ರಿಯ ಯೋಜನೆಯೇ ಹೊರತು ಜನಪರವಾದುದಲ್ಲ, ಕನ್ನಡಪರವಾದುದೂ ಅಲ್ಲ. ಈ ಶಾಲೆಗಳಲ್ಲಿ ಬೋಧಿಸುವ ಶಿಕ್ಷಕರ ಇಂಗ್ಲಿಷ್ ಗುಣಮಟ್ಟದ ಬಗ್ಗೆ ಸರ್ಕಾರಕ್ಕೆ ಕಾಳಜಿಯಿದ್ದಂತಿಲ್ಲ. ಕೆಲವು ರಾಜ್ಯಗಳಲ್ಲಿ ಈಗಾಗಲೇ ನಡೆಯುತ್ತಿರುವ ಇಂಗ್ಲಿಷ್ ಮಾಧ್ಯಮದ ಸರ್ಕಾರಿ ತರಗತಿಗಳು ಹಳ್ಳ ಹಿಡಿದಿರುವುದು ವರದಿಯಾಗಿದೆ. ಪ್ರಸ್ತುತ, ಗ್ರಾಮೀಣ–ಪಟ್ಟಣ ಪ್ರದೇಶಗಳ ಅನೇಕ ಶಾಲಾ ಕಾಲೇಜುಗಳಲ್ಲಿ ಇಂಗ್ಲಿಷ್ ಭಾಷೆಯ ಪಠ್ಯವನ್ನು ಕನ್ನಡದಲ್ಲಿಯೇ ಬೋಧಿಸಲಾಗುತ್ತಿದೆ. ಹೀಗಾಗಿ, ಇಂಗ್ಲಿಷ್ ಮಾಧ್ಯಮದ ತರಗತಿಗಳು ಕನ್ನಡದಲ್ಲಿಯೇ ನಡೆಯುವಂತಾದರೆ ಆಶ್ಚರ್ಯವಿಲ್ಲ. ಇಂಗ್ಲಿಷನ್ನು ಒಂದು ಭಾಷೆಯನ್ನಾಗಿ ಒಂದನೇ ತರಗತಿಯಿಂದಲೇ ಪರಿಣಾಮಕಾರಿಯಾಗಿ ಕಲಿಸುವ ಬಗ್ಗೆ ಸರ್ಕಾರಕ್ಕೆ ಮನಸ್ಸಿದ್ದಂತಿಲ್ಲ. ಏಕೆಂದರೆ, ಇಂಗ್ಲಿಷ್ ಮಾಧ್ಯಮದ ಆರಂಭ ಒಂದು ಜನಪ್ರಿಯ ಘೋಷಣೆಯಾಗುವುದೇ ಹೊರತು, ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವುದಲ್ಲ ಎನ್ನುವ ಲೆಕ್ಕಾಚಾರ ಸರ್ಕಾರದ್ದು.

ಬಹುತೇಕ ಖಾಸಗಿ ಶಾಲೆಗಳು ಜನಪ್ರತಿನಿಧಿಗಳ ಒಡೆತನದಲ್ಲಿವೆ. ಖಾಸಗಿಸಂಸ್ಥೆಗಳ ಫಲಾನುಭವಿಗಳು ಎಲ್ಲ ರಾಜಕೀಯ ಪಕ್ಷಗಳಲ್ಲಿದ್ದಾರೆ. ಇಂಥ ಜನಪ್ರತಿನಿಧಿಗಳನ್ನೊಳಗೊಂಡ ಸರ್ಕಾರ, ಸರ್ಕಾರಿ ಶಾಲೆಗಳ ಹಿತ ಕಾಯುತ್ತದೆಂದು ನಿರೀಕ್ಷಿಸುವುದು ಕಷ್ಟ. ಪ್ರಾಥಮಿಕ ಶಿಕ್ಷಣವನ್ನು ಹೆಚ್ಚೂ ಕಡಿಮೆ ಖಾಸಗೀಕರಣ ಮಾಡಿರುವ ಸರ್ಕಾರ, ಸರ್ಕಾರಿ ಶಾಲೆಗಳನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸುವ ಮೂಲಕ ವಿದ್ಯಾರ್ಥಿಗಳು ಖಾಸಗಿ ಶಾಲೆಗಳತ್ತ ಮುಖ ಮಾಡುವ ಸಂದರ್ಭವನ್ನು ಸೃಷ್ಟಿಸಿದೆ; ಜನಸಾಮಾನ್ಯ ಮತ್ತು ಗ್ರಾಮೀಣ ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ತನ್ನ ವೈಫಲ್ಯವನ್ನು ಮರೆಮಾಚುವ ನಿಟ್ಟಿನಲ್ಲಿ ಸರ್ಕಾರ ಇದೀಗ ಇಂಗ್ಲಿಷ್ ಮಾಧ್ಯಮದ ಪ್ಲಕಾರ್ಡ್ ಹಿಡಿದು ಜನರನ್ನು ಮರುಳುಗೊಳಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೂಡ ಸರ್ಕಾರಿ ಶಾಲೆಗಳ ಉಳಿವಿಗಾಗಿ ದೊಡ್ಡದೊಂದು ಚಳವಳಿ ನಡೆಯಬೇಕಾದುದು ಈ ಹೊತ್ತಿನ ಅಗತ್ಯ.

ಚಳವಳಿ ರೂಪುಗೊಳ್ಳಬೇಕಿರುವುದು ಸರ್ಕಾರಿ ಶಾಲೆಗಳಲ್ಲಿ ಯಾವ ಮಾಧ್ಯಮ ಇರಬೇಕೆನ್ನುವುದರ ಕುರಿತಾಗಿಯಲ್ಲ; ಸರ್ಕಾರಿ ಶಾಲೆಗಳನ್ನು ಯಾವ ಸ್ವರೂಪದಲ್ಲಿ ಉಳಿಸಿಕೊಳ್ಳಬೇಕು ಎನ್ನುವುದರ ಬಗ್ಗೆ. ಸರ್ಕಾರಿ ಶಾಲೆಗಳನ್ನು ಸಬಲಗೊಳಿಸುವ ಬಗ್ಗೆ, ಸರ್ಕಾರಿ–ಖಾಸಗಿ ಶಾಲೆಗಳ ನಡುವೆ ಗುಣಮಟ್ಟದ ಅಂತರ ಇಲ್ಲದಂತೆ ಮಾಡುವ ಬಗ್ಗೆ ಚರ್ಚೆಗಳು ನಡೆಯಬೇಕಿದೆ. ಕನ್ನಡ ಮಾಧ್ಯಮ ಎನ್ನುವುದು ಸಾಹಿತಿಗಳ ಪಾಲಿಗೆ ಭಾವುಕತೆಯ ಪ್ರಶ್ನೆಯಾಗಿದ್ದರೆ, ಪೋಷಕರು ಇಂಗ್ಲಿಷ್ ಮಾಧ್ಯಮವನ್ನು ಅನ್ನದ ದಾರಿಯಾಗಿ ನೋಡುತ್ತಿದ್ದಾರೆ. ಭಾವನೆ ಹಾಗೂ ಅನ್ನದ ದಾರಿ ಎರಡೂ ಸಮನ್ವಯಗೊಳ್ಳುವ ದಾರಿಯೊಂದನ್ನು ಕಂಡುಕೊಳ್ಳಬೇಕಾದುದು ಈಗ ಆಗಬೇಕಿರುವ ಕೆಲಸ. ಸರ್ಕಾರಿ ಶಾಲೆಗಳ ಸಬಲೀಕರಣದ ಜೊತೆಗೆ ಖಾಸಗಿ ಶಾಲೆಗಳ ನಿಯಂತ್ರಣದ ಬಗ್ಗೆಯೂ ಕಾರ್ಯತತ್ಪರವಾಗುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ಚಳವಳಿಯನ್ನು ರೂಪಿಸುವ ಬಗ್ಗೆ ಕನ್ನಡದ ಸಾಂಸ್ಕೃತಿಕಲೋಕ ಯೋಚಿಸಬೇಕಿದೆ.

■ ರಘುನಾಥ ಚ.ಹ.




ಶಶಿಕಿರಣ್